ಓ.ಎಸ್. ನಂಃ **277/2016**
ಡಿ.ಡಬ್ಲ್ಯೂಃ **1**

ದಿನಾಂಕ **07-03-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯರ ಪರ: ಶ್ರೀ. ಎಂ ಎಂ ಕೆ ವಕೀಲರಿಂದಃ

ನಿಮಗೆ ಕನ್ನಡ ಮಾತನಾಡಲು ಬರುತ್ತದೆ ಎಂದರೆ ಸಾಕ್ಷಿ ಸ್ವಲ್ಪ-ಸ್ವಲ್ಪ ಬರುತ್ತದೆ ಎಂದು ನುಡಿಯುತ್ತಾರೆ. ನನಗೆ ಇಂಗ್ಲೀಷ್ ಭಾಷೆ ಓದಲು-ಬರೆಯಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದಿ ಎರಡು ಜಮೀನುಗಳ ಮೇಲೆ ದಾವೆ ದಾಖಲು ಮಾಡಿದ್ದಾರೆ. ಸದರಿ ಜಮೀನುಗಳ ಸರ್ವೆ ನಂಬರು ನನಗೆ ಗೊತ್ತಿಲ್ಲ. ಒಂದು ಜಮೀನು 08 ಎಕರೆ ಹಾಗೂ ಇನ್ನೊಂದು ಜಮೀನು 33 ಗುಂಟೆ ಇದೆ. ನನ್ನ ತವರೂರು ಅಪ್ಪಂಪಲ್ಲಿ ಗ್ರಾಮ ಆಗಿರುತ್ತದೆ. ನನಗೆ ಈಗ 35 ವರ್ಷ ವಯಸ್ಸಾಗಿದೆ. ನನ್ನ ಮದುವೆ ಸಮಯದಲ್ಲಿ ನನಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆ ಪೂರ್ವದಲ್ಲಿನ ಕೊಂಕಲ್ ಗ್ರಾಮದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಮದುವೆ ಆಗುವ ಪೂರ್ವದಲ್ಲಿಯೇ ನನ್ನ ತಾತ ಅಂತಪ್ಪ ತೀರಿಕೊಂಡಿದ್ದರು ಎಂದರೆ ಸರಿ. ಸದರಿ ಅಂತಪ್ಪ ರವರು ಯಾವಾಗ ಮದುವೆ ಮಾಡಿಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಂತಪ್ಪ ರವರು ಯಾರು-ಯಾರನ್ನು ಮದುವೆಯಾಗಿದ್ದರು ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ಅಜ್ಜಿ ಅನಂತಮ್ಮ ಒಬ್ಬರನ್ನು ಮಾತ್ರ ಆತ ಮದುವೆಯಾಗಿದ್ದನು ಎಂದು ನುಡಿಯುತ್ತಾರೆ. ಸದರಿ ನನ್ನ ಅಜ್ಜಿ ನನ್ನ ಮದುವೆ ಸಮಯದಲ್ಲಿ ಜೀವಂತ ಇದ್ದರು. ನನ್ನ ಅಜ್ಜಿ ಯಾವಾಗ ತೀರಿಕೊಂಡಿದ್ದಾರೆ ಎಂಬುದು ನನಗೆ ನೆನಪಿಲ್ಲ. ನಾನು ಅವರು ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ.

2. ನನ್ನ ಮಾವ ಸಾಬಣ್ಣ ಈಗ 05 ವರ್ಷಗಳ ಹಿಂದೆ ಮರಣಹೊಂದಿದ್ದಾರೆ. ನನ್ನ ಮಾವನ ಮರಣ ದಿನಾಂಕ ನನಗೆ ನೆನಪಿಲ್ಲ. ನಿಮ್ಮ ಮಾವ ದಿನಾಂಕ 06.04.2019 ರಂದು ಮರಣಹೊಂದಿದ್ದಾರೆ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ಮಾವ ಸಾಬಣ್ಣ ರವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿಯಲ್ಲ. ಆತನ ಹಿರಿಯ ಹೆಂಡತಿ ಹೆಸರು ಚನ್ನಮ್ಮ ಎಂದು ಇತ್ತು ಎಂದರೆ ಸರಿಯಲ್ಲ. ಆಕೆಯ ತವರೂರು ಸೇರಂಪಲ್ಲಿ ಆಗಿತ್ತು ಎಂದರೆ ಸರಿಯಲ್ಲ. ಚನ್ನಮ್ಮ

ಮಕ್ಕಳಾಗದೆ ತೀರಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆಯ ಹೆಸರು ಶರಣಮ್ಮ ಎಂದು ಇರುತ್ತದೆ ಎಂದರೆ ಸರಿ. ನನ್ನ ಅತ್ತೆ ಶರಣಮ್ಮ ರವರ ತವರೂರು ಕಾಳೆಬೆಳಗುಂದಿ ಆಗಿರುತ್ತದೆ ಎಂದರೆ ಸರಿ. ನನ್ನ ಗಂಡ ನನ್ನ ಅತ್ತೆಯ ಏಕಮಾತ್ರ ಮಗ ಆಗಿರುತ್ತಾನೆ ಎಂದರೆ ಸರಿ. ನನ್ನ ಗಂಡ ಈಗ 15 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನನ್ನ ಗಂಡನ ಮರಣ ದಿನಾಂಕ ನನಗೆ ನೆನಪಿಲ್ಲ. ನಿಮ್ಮ ಗಂಡ ದಿನಾಂಕ05.05.2011 ರಂದು ಮರಣಹೊಂದಿದ್ದಾರೆ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಗಂಡ ತೀರಿಕೊಂಡಾಗ ನಿಮಗೆ ಮಕ್ಕಳಾಗಿರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ, ಇಬ್ಬರು ಹೆಣ್ಣು ಮಕ್ಕಳು ಜನಿಸಿದ್ದರು ಹಾಗೂ ನಾನು ಆಗ 3 ನೇ ಮಗುವಿನ 07 ತಿಂಗಳ ಗರ್ಭಿಣಿಯಾಗಿದ್ದೆನು ಎಂದು ನುಡಿಯುತ್ತಾರೆ. ನನ್ನ ಸದರಿ ಇಬ್ಬರು ಹೆಣ್ಣು ಮಕ್ಕಳು ಜೀವಂತವಾಗಿದ್ದಾರೆ. ನನ್ನ ಸದರಿ ಇಬ್ಬರು ಹೆಣ್ಣು ಮಕ್ಕಳು ಜೀವಂತ ಇದ್ದಾರೆ ಎಂಬುದು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೇನೆ. ನನ್ನ ಮಗನ ಜನನ ದಿನಾಂಕ ನನಗೆ ನೆನಪಿಲ್ಲ, ಆದರೆ ಆತನಿಗೆ ಈಗ 15 ವರ್ಷ ವಯಸ್ಸಾಗಿದೆ.

3. ವಾದಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮದು ಒಂದೇ ಮನೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ಎರಡು ಕೋಣೆಗಳು ಇದ್ದಾವೆ ಎಂದರೆ ಸರಿಯಲ್ಲ. ಆ ಪೈಕಿ ಒಂದು ಕೋಣೆಯಲ್ಲಿ ನಾವು ಹಾಗೂ ಇನ್ನೊಂದು ಕೋಣೆಯಲ್ಲಿ ವಾದಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಇಬ್ಬರು ಮಕ್ಕಳು ಸಹ ಸದರಿ ಮನೆಯಲ್ಲಿಯೇ ಹುಟ್ಟಿ-ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಇಬ್ಬರ ಮದುವೆಯೂ ಸಹ ಅದೇ ಮನೆಯಲ್ಲಿ ಆಗಿದೆ ಎಂದರೆ ಸರಿಯಲ್ಲ. ಸದರಿ ಇಬ್ಬರ ಮದುವೆ ಆಗುವ ಸಮಯದಲ್ಲಿ ನಿಮ್ಮ ಮದುವೆ ಆಗಿರಲಿಲ್ಲ ಎಂದರೆ ಸಾಕ್ಷಿ ನಾನು ಅವರನ್ನು ನೋಡಿಲ್ಲ ಹಾಗೂ ನನಗೆ ಅವರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯನ್ನು ನಂದೇಪಲ್ಲಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಗಂಡ ತೀರಿಕೊಂಡ ನಂತರ ವಾದಿ ತವರು ಮನೆಯಲ್ಲಿ ನನ್ನ ಮಾವ ಸಾಬಣ್ಣ ರವರೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆ ಸಮಯದಲ್ಲಿ ವಾದಿಯ ತಾಯಿ ಸಾಯಮ್ಮ ಜೀವಂತ ಇದ್ದರು ಎಂದರೆ ಸರಿಯಲ್ಲ. ನನ್ನ ಮಾವ ಸಾಬಣ್ಣ ರವರ ತಾಯಿ ಆತ ಆತನ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ಅಂತಪ್ಪ ರವರು ವಾದಿಯ ತಾಯಿ ಸಾಯಮ್ಮ ರವರೊಂದಿಗೆ 2 ನೇ ಮದುವೆ ಆಗಿದ್ದರು ಎಂದರೆ ಸರಿಯಲ್ಲ. ಆ ನಂತರ ಸಾಯಮ್ಮ

ರವರಿಗೆ ವಾದಿ ಹಾಗೂ 1 ನೇ ಪ್ರತಿವಾದಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಾವ ಸಾಬಣ್ಣ ರವರನ್ನು ವಾದಿ ಹಾಗೂ ಅವರ ತಾಯಿಯೇ ಬೆಳೆಸಿ ದೊಡ್ಡವನನ್ನು ಮಾಡಿ ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ನನ್ನ ಅತ್ತೆ ಶರಣಮ್ಮ ತೀರಿಕೊಂಡು ಈಗ 17 ವರ್ಷಗಳ ಆಗಿದೆ. ನಾನು ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ. ನನ್ನ ಅತ್ತೆ ತೀರಿಕೊಂಡ ನಂತರ ವಾದಿಯ ತಾಯಿ ಸಾಯಮ್ಮ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಯಮ್ಮ ತೀರಿಕೊಂಡ ನಂತರ ನಿಮ್ಮ ಮಾವ ಸಾಬಣ್ಣ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿ ನನ್ನ ಮಾವ ತೀರಿಕೊಂಡು 05 ವರ್ಷ ಆಗಿದೆ ಎಂದು ನುಡಿಯುತ್ತಾರೆ. ಈಗೆ ಒಬ್ಬರಾದ ನಂತರ ಇನ್ನೊಬ್ಬರು ತೀರಿಕೊಂಡ ನಂತರ ನಾವು ವಾದಿಗೆ ತೊಂದರೆ ನೀಡಲು ಪ್ರಾರಂಬಿಸಿದ್ದೆವು ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ಊರಿನಲ್ಲಿ 2-3 ಸಲ ನ್ಯಾಯ ಪಂಚಾಯಿತಿ ಆಗಿತ್ತು ಎಂದರೆ ಸರಿಯಲ್ಲ. ರಾಮಲಿಂಗಪ್ಪ ತಂದೆ ಸಣ್ಣ ಸಾಬಣ್ಣ ಎಂಬಾತ ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮರಳಮ್ಮ ಗಂಡ ತಾಯಪ್ಪ ಎಂಬುವವರು ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನರಸಪ್ಪ ತಂದೆ ಮಲ್ಲಪ್ಪ ಎಂಬುವವರು ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂಜಪ್ಪ ರೆಡ್ಡೆಪ್ಪಗೊಳ ಎಂಬುವವರು ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಮಕೃಷ್ಣ ಕಟ್ಟಲ್ ಎಂಬುವವರು ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನರಸಿಂಗಪ್ಪ ತಂದೆ ದತ್ತಪ್ಪ ಕಟ್ಟಲ್ ಎಂಬುವವರು ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಣಮಂತ ತಂದೆ ತಮ್ಮಣ್ಣ ಎಂಬುವವರು ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಿವರಾಯಪ್ಪ ತಂದೆ ನಿಂಗಪ್ಪ ಎಂಬುವವರು ನಿಮ್ಮ ಗ್ರಾಮದವರು ಆಗಿರುತ್ತಾರೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಎಲ್ಲಾರ ಸಮಕ್ಷಮ ಊರಿನಲ್ಲಿ 2-3 ಸಲ ಪಂಚಾಯಿತಿ ಆಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಮ್ಮ ಮಾವ ಜೀವಂತ ಇದ್ದರು ಎಂದರೆ ಸಾಕ್ಷಿ ಎಲ್ಲಾ ಸುಳ್ಳು ಎಂದು

ನುಡಿಯುತ್ತಾರೆ. ಆಗ ನನ್ನ ಮಾವ ಹಳ್ಳಿಯಲ್ಲಿ ಯಾವುದೇ ಹೆಣ್ಣು ಮಕ್ಕಳಿಗೆ ಪಾಲು ಕೊಟ್ಟಿಲ್ಲ ಹಾಗಾಗಿ ನಾನು ಕೊಡುವುದಿಲ್ಲ ಎಂದು ನ್ಯಾಯ ಪಂಚಾಯಿತಿ ಮುರಿದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ವಾದಿ ಹಾಗೂ 1 ನೇ ಪ್ರತಿವಾದಿ ತಮ್ಮ ತಾಯಿಯ ಪಾಲು ತಮಗೆ ಬರಬೇಕೆಂದು ಪಟ್ಟು ಹಿಡಿದಿದ್ದರು ಎಂದರೆ ಸರಿಯಲ್ಲ. ಅವರಿಗೆ ಪಾಲು ಕೊಡಬೇಕೆಂದು ಪಂಚಾಯಿತಿಯಲ್ಲಿ ನಿರ್ಣಯ ಆಗಿತ್ತು ಎಂದರೆ ಸರಿಯಲ್ಲ.

5. ಗಾಜರಕೋಟ ಗ್ರಾಮದ ಶರಣಪ್ಪ ಹಾಗೂ ಆನಂದ ಎಂಬುವವರು ನನ್ನನ್ನು ಪ್ರತೀ ತಾರೀಖಿನಂದು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಾರೆ ಎಂದರೆ ಸರಿಯಲ್ಲ. ಅವರುಗಳು ಹೇಳಿ ಕೊಟ್ಟಂತೆ ನಾನು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಹಾಗೂ ವಾದಿ ಈಗಲೂ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ನಾನು ತವರು ಮನೆಗೆ ಹೋಗಿದ್ದೆನು ಎಂದರೆ ಸರಿಯಲ್ಲ. ನಾನು ತವರು ಮನೆಗೆ ಹೋಗಿದ್ದರಿಂದ ನನ್ನ ಗಂಡನ ಮರಣ ಪ್ರಮಾಣ ಪತ್ರವನ್ನು ಆತನ ಅತ್ತೆಯಾದ ವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಾವ ಸಾಬಣ್ಣ ರವರ ಮರಣ ಪ್ರಮಾಣ ಪತ್ರವನ್ನು ಸಹ ವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ